# ಸೀಪ್ ಗಾರ್ಡ್ ಹಾರಿಝೊಂಟಲ್ ಸರ್ಫೇಸಸ್




### *ಮೇಲ್ಛಾವಣಿಗಳು ಮತ್ತು ಟೆರೇಸ್‌ಗಳಿಗೆ ಬಿಳಿ ಸಿಮೆಂಟಿನಂತಹ ಒಂದು ಘಟಕ ಶಾಖವನ್ನು ಪ್ರತಿಫಲಿಸುವ ವಾಟರ್‌ಪ್ರೂಫ್ ಕೋಟಿಂಗ್*

ಸೀಪ್ ಗಾರ್ಡ್ ಹಾರಿಝೊಂಟಲ್ ಸರ್ಫೇಸಸ್ ಎಂಬುದು ಅಡ್ಡಡ್ಡ ಆರ್‌ಸಿಸಿ, ಕಾಂಕ್ರೀಟ್ ಮತ್ತು ಸಿಮೆಂಟಿನಂತಹ ಮೇಲ್ಮೈಗಳಿಗೆ ಸೂಕ್ತವಾದ ಪಾಲಿಮರ್ ಮಾಡಿಫೈಡ್, ಬಿಳಿ ಸಿಮೆಂಟಿನಂತಹ, ಉಚ್ಚ ಪರ್ಫಾರ್ಮೆನ್ಸ್‌ನ ಕೋಟಿಂಗ್ ಸಿಸ್ಟಮ್ ಆಗಿದೆ. ಇದನ್ನು ಜರ್ಮನ್ ಇಲ್ಯಾಸ್ಟೋಮೆರಿಕ್ ಪಾಲಿಮರ್ ಮತ್ತು ಬಿಳಿ ಸಿಮೆಂಟಿನಿಂದ ತಯಾರಿಸಲಾಗಿದೆ. ಈ ಒಂದೇ ಪ್ರಾಡಕ್ಟ್‌ನಲ್ಲಿ ಶಾಖವನ್ನು ಕಡಿಮೆ ಮಾಡುವ ಹಾಗೂ ವಾಟರ್‌ಪ್ರೂಫ್ ಮಾಡುವ ಎರಡೂ ಪ್ರಯೋಜನಗಳು ಪರಸ್ಪರ ಕೂಡಿಕೊಂಡಿವೆ.

## ಹಚ್ಚುವ ಏರಿಯಗಳು

- ಎಲ್ಲಾ ರೀತಿಯ ಹೊಸ ಮತ್ತು ಹಾಲಿ ಇರುವ ಅಡ್ಡಡ್ಡ ಕಾಂಕ್ರೀಟ್, ಆರ್‌ಸಿಸಿ ಮತ್ತು ಸಿಮೆಂಟಿನಂತಹ ಮೇಲ್ಮೈಗಳು.
- ಕಟ್ಟಡಗಳ ಮೇಲ್ಛಾವಣಿಗಳು (ರೂಫ್‌ಗಳು) ಮತ್ತು ಟೆರೇಸ್‌ಗಳು, ನೀರಿನ ಟ್ಯಾಂಕ್‌ಗಳು, ಬಾಲ್ಕನಿಗಳು, ಈಜುವ ಕೊಳಗಳು, ಬೇಸ್‌ಮೆಂಟ್‌ಗಳು, ಪಾರ್ಕಿಂಗ್.

## ಪ್ರಾಡಕ್ಟ್‌ನ ವಿಶೇಷತೆಗಳು ಮತ್ತು ಪ್ರಯೋಜನಗಳು

- **ಹೆಚ್ಚು ಜಲನಿರೋಧಕ:** ಪಾಸಿಟಿವ್ ಹೈಡ್ರೋಸ್ಟ್ಯಾಟಿಕ್ ಪ್ರೆಶರ್‌ನ 7 ಬಾರ್‌ಗಳ ವರೆಗೆ ವಾಟರ್‌ಪ್ರೂಫಿಂಗ್ ರಕ್ಷಣೆ.
- **ಅಂಟಿಕೊಳ್ಳುವುದು:** ಆರ್‌ಸಿಸಿ, ಕಾಂಕ್ರೀಟ್ ಮತ್ತು ಸಿಮೆಂಟಿನಂತಹ ಮೇಲ್ಮೈಗಳಿಗೆ ತುಂಬಾ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.
- **ಬಾಳಿಕೆ:** ನಿಮ್ಮ ಕಟ್ಟಡದ ಮೇಲ್ಮೈಯನ್ನು ಲೀಕೇಜ್ ಮತ್ತು ಸೀಪೇಜ್‌ನ ಡ್ಯಾಮೇಜ್‌ಗಳಿಂದ ರಕ್ಷಿಸುತ್ತದೆ.
- **ಬಿರುಕುಗಳನ್ನು ಮುಚ್ಚುವುದು:** ಇದರಲ್ಲಿ ಜರ್ಮನ್ ಇಲ್ಯಾಸ್ಟೋಮೆರಿಕ್ ಪಾಲಿಮರ್‌ಗಳು ಇರುವುದರಿಂದ ಇದು ಉತ್ಕೃಷ್ಟ ರೀತಿಯಲ್ಲಿ ಬಿರುಕುಗಳನ್ನು ಮುಚ್ಚುವ ಗುಣಗಳನ್ನು ಹೊಂದಿದೆ.
- **ಪ್ರಮಾಣಿಕೃತ ಫುಡ್ ಗ್ರೇಡ್:** ಪ್ರಾಡಕ್ಟ್ ಅನ್ನು ಸೆಂಟ್ರಲ್ ಫುಡ್ ಟೆಕ್ನಾಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಿಂದ ಪ್ರಮಾಣಿಕರಿಸಲಾಗಿದೆ ಹಾಗೂ ನೀರಿನ ಟ್ಯಾಂಕ್‌ಗಳು, ಜಲಾಶಯಗಳು ಮುಂತಾದವುಗಳಲ್ಲಿ ಬಳಸಲು ಸುರಕ್ಷಿತವಾಗಿರುತ್ತದೆ.
- **ಬಳಸುವುದು ಮತ್ತು ಕಾಯ್ದಿರಿಸಿಕೊಂಡು ಬರುವುದು:** ಇದು ಸಿಂಗಲ್ ಪ್ಯಾಕ್, ಬಿಳಿ ಸಿಮೆಂಟ್-ಆಧಾರಿತ ಪಾಲಿಮರ್ ಮಾಡಿಫೈಡ್ ಪೌಡರ್ ಪ್ರಾಡಕ್ಟ್ ಆಗಿದೆ.
- **ಬಿಳಿ ಪುಡಿ ನಿರ್ಮಾಣ ವಿರೋಧಿ:** ಇದು ಗೋಡೆಗಳ ಮೇಲೆ ಬಿಳಿ ಪುಡಿ ಉಂಟಾಗುವುದನ್ನು ತಡೆಯುತ್ತದೆ ಮತ್ತು ದೀರ್ಘಕಾಲದ ಪರಿಣಾಮವನ್ನು ನೀಡುತ್ತದೆ.
- **ಶಾಖದ ಪ್ರತಿಫಲನ ಮತ್ತು ಯುವಿ ನಿರೋಧಕ:** ಬಿಸಿಲಿಗೆ ತೆರೆದುಕೊಂಡ ಮೇಲ್ಮೈಗಳಿಗೆ ಹಚ್ಚಿದಾಗ, ಇದು ಹೆಚ್ಚು ಉತ್ತಮ ಮಟ್ಟದ ಯುವಿ ನಿರೋಧಕ ಪ್ರತಿಫಲನ ಹೊಂದಿರುವ ಕೋಟಿಂಗ್ ಆಗಿದೆ ಮತ್ತು 6-8°ಸೆಂ.ನಷ್ಟು ಶಾಖವನ್ನು ಕಡಿಮೆ ಮಾಡುತ್ತದೆ.
- **ಪರಿಸರ-ಸ್ನೇಹಿ:** ಇದರಲ್ಲಿ ವೊಲಟೈಲ್ ಆರ್ಗ್ಯಾನಿಕ್ ಕಾಂಪೌಂಡ್ ಇಲ್ಲ (VOC).
- **ಪಾಚಿ ಮತ್ತು ಫಂಗಸ್ ನಿರೋಧಕ**
- **ವಾರಂಟಿ:** ಈ ಪ್ರಾಡಕ್ಟ್ 08 ವರ್ಷಗಳ ವಾಟರ್‌ಪ್ರೂಫಿಂಗ್ ವಾರಂಟಿಯನ್ನು ಕೊಡುತ್ತದೆ.

## ಪ್ಯಾಕ್‌ಗಳು

- 15 ಕೇಜಿ

# ತಾಂತ್ರಿಕ ಮಾಹಿತಿ

| Properties | Seep Guard Horizontal Surfaces | Test Method |
|---|---|---|
| Tensile Adhesion Strength (pull off) (n/mm²) @ 28 days | 2.21 | ASTM D7234 |
| Water Impermeability (Against Hydrostatic Pressure) (Bar) | Positive: Nil at 7 bar & 4mm @10 bar<br>Negative: Pass @ 5 bar | EN 12390-8:2000 |
| Crack Bridging (MM) | No cracking up to 2.10 mm | EN 1062-7 |
| Alkali Resistance | No colour change | IS 15489 |
| Fungal Resistant | Zero rating | ASTM G 21 |
| Coverage* Horizontal Surface: Three coats on RCC/concrete surface (Priming coat with 100% + Two coat with 60-65%, Sq.ft./Kg) | 12-13 | In-House |
| Pot Life (hours) | 1.5 | In-House |
| Reduction of surface temp. at Noon time (°C) | 6-8 | In-House |
| Food Grade Certification | Pass | CFTRI Certification |

*This value is on ideal concrete surface; however, this may change according to surface pattern/ texture.



## ಶೆಲ್ಫ್ ಲೈಫ್

ತೆರೆಯದೆ ಇರುವ ಮತ್ತು ಸರಿಯಾದ ಶೇಖರಣೆಯ ಪರಿಸ್ಥಿತಿಗಳಲ್ಲಿ ಇಟ್ಟರೆ, ಉತ್ಪಾದಿಸಿದ ತಿಂಗಳಿಂದ 12 ತಿಂಗಳ ವರೆಗೆ




ನೀರಿನ ಅತ್ಯಧಿಕ ನಿರೋಧಕ




ಮೇಲ್ಮೈ ಉಷ್ಣತೆಯನ್ನು ಕಡಿಮೆ ಮಾಡುತ್ತದೆ



ಯುವಿ ನಿರೋಧಕ



# ಹೇಗೆ ಹಚ್ಚಬೇಕು

## ಮೇಲ್ಮೈ ಸಿದ್ಧತೆ

- ಎಮರಿ ಪೇಪರ್ (ಮರಳಿನ ಕಾಗದ), ಚಾಣ ಅಥವಾ ವೈರ್ ಬ್ರಶ್ ಇತ್ಯಾದಿಯನ್ನು ಉಪಯೋಗಿಸಿ ಮೇಲ್ಮೈಯಿಂದ ಕೊಳೆ, ಧೂಳು, ಜೈವಿಕ ದ್ರಾವಕ (ಡೀ-ಶಟರಿಂಗ್/ ಕ್ಯೂರಿಂಗ್ ಫ್ರೀ ಕಾಂಪೌಂಡ್) ಮತ್ತು ಎಣ್ಣೆ ಇತ್ಯಾದಿಯಂತಹ ಸಡಿಲವಾಗಿ ಅಂಟಿಕೊಂಡ ವಸ್ತುಗಳನ್ನು ತೆಗೆಯಿರಿ.
- ಬಿಳಿ ಪುಡಿ ಉಂಟಾಗಿದ್ದ ಪ್ರಸಂಗದಲ್ಲಿ, ಮೇಲ್ಮೈಯಿಂದ ಎಲ್ಲಾ ಸಡಿಲ ಕಣಗಳನ್ನೂ ತೆಗೆಯುವ ಸಲುವಾಗಿ, ಮೇಲ್ಮೈಯನ್ನು ಪೂರ್ತಿಯಾಗಿ ಸ್ವಚ್ಛ ಮಾಡಬೇಕು.
- ಮೇಲ್ಮೈಯನ್ನು ಸ್ವಚ್ಛ ನೀರಿನಿಂದ ಸರಿಯಾಗಿ ತೊಳೆಯಿರಿ ಮತ್ತು ಅದನ್ನು ಸಂಪೂರ್ಣವಾಗಿ ಒಣಗಲು ಬಿಡಿ. ಅದರ ನಂತರವೇ ಪ್ರಾಡಕ್ಟನ್ನು ಹಚ್ಚಿ.
- ಮೇಲ್ಮೈಯ (3 ಎಮ್ಎಮ್) ಮತ್ತು ದೊಡ್ಡ ಬಿರುಕುಗಳನ್ನು ಸೀಪ್ ಗಾರ್ಡ್ ಕ್ರ್ಯಾಕ್ ಎಂಡ್ ತುಂಬಿಸಬೇಕು, ಹಾಳಾದ ಭಾಗಗಳು ಮತ್ತು ಟೊಳ್ಳು ಜಾಗಗಳನ್ನು ಬಿರ್ಲಾ ವೈಟ್ ಲೆವೆಲ್‌ಪ್ಲಾಸ್ಟ್‌ನಿಂದ (ಪಾಲಿಮರ್ ಸಿಮೆಂಟ್ ಮಾಡಿಫೈಡ್ ಮಾರ್ಟರ್ ಪ್ರಾಡಕ್ಟ್) ರಿಪೇರಿ ಮಾಡಬೇಕು.

## ಪ್ರೈಮಿಂಗ್ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 100% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 1000 ಎಮ್‌ಎಲ್ ನೀರು) ನಿಧಾನವಾಗಿ ಸೇರಿಸಿ.
- ಅತ್ಯುತ್ತಮ ಪರ್ಫಾರ್ಮೆನ್ಸ್ ಪಡೆಯುವುದಕ್ಕೆ ಚೆನ್ನಾಗಿ ಮಿಶ್ರಗೊಳಿಸಿದ ನಂತರ ರಾಡಿಯನ್ನು 5 ನಿಮಿಷ ಹಾಗೆಯೇ ಇರಲು ಬಿಡಿ. ತಯಾರಿಸಿದ ರಾಡಿಯನ್ನು 11.5 ಗಂಟೆಯೊಳಗೆ ಬಳಸಬೇಕು.
- ಒಳ್ಳೆಯ ಮಿಶ್ರಣ ತಯಾರಿಸಿದ ನಂತರ ಪೆಯಿಂಟಿಂಗ್ ಬ್ರಶ್/ರೋಲರ್‌ನ ಸಹಾಯದಿಂದ ಸ್ವಚ್ಛ ಹಾಗೂ ಒಣಗಿದ ಗೋಡೆಯ /ಅಡಿ-ಪದರದ ಮೇಲ್ಮೈ ಮೇಲೆ ಏಕಪ್ರಕಾರವಾಗಿ ಪ್ರೈಮಿಂಗ್ ಕೋಟ್ ಮಾಡಿ.

## 1ನೇ ಮತ್ತು 2ನೇ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 60%-65% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 600-650 ಎಮ್‌ಎಲ್ ನೀರು) ನಿಧಾನವಾಗಿ ಸೇರಿಸಿ.
- ಸಾಧ್ಯವಾದರೆ ಮಿಶ್ರಣವನ್ನು ಕದಡುವ ಯಂತ್ರದಿಂದ (mechanical stirrer) (3-5 ನಿಮಿಷಗಳು) ತಯಾರಿಸಬೇಕು.
- ಹೆಚ್ಚು ಉತ್ತಮವಾಗಿ ಅಂಟಿಕೊಳ್ಳುವುದಕ್ಕೆ ಮತ್ತು ಹೆಚ್ಚು ಕವರೇಜ್‌ಗೆ, ಒಳ್ಳೆಯ ಮಿಶ್ರಣ ತಯಾರಿಸಿದ ನಂತರ 4-6 ಗಂಟೆಗಳ ಮಧ್ಯಾಂತರದಲ್ಲಿ ಅಡ್ಡ ದಿಕ್ಕಿನಿಂದ ಪ್ರಾಡಕ್ಟ್‌ನ ಎರಡು ಕೋಟಿಂಗ್ ಮಾಡಿ.
- ಟೆರೇಸ್‌ನಲ್ಲಿ ಅತ್ಯುತ್ತಮ ಪರ್ಫಾರ್ಮೆನ್ಸ್ ಪಡೆಯುವುದಕ್ಕೆ, ಪ್ಯಾರಪೆಟ್ ಗೋಡೆ ಸೇರಿದಂತೆ ಸಂಪೂರ್ಣ ಮೇಲ್ಛಾವಣಿಗೆ (ರೂಫ್) ಪ್ರಾಡಕ್ಟನ್ನು ಹಚ್ಚಬೇಕು.
- ಎರಡೂ ಕೋಟಿಂಗ್‌ಗಳ ಒಟ್ಟು ದಪ್ಪ ಹೆಚ್ಚೆಂದರೆ 1.5 ಎಮ್‌ಎಮ್‌ಗೆ ಸೀಮಿತವಾಗಿರಬೇಕು.

# SEEPGUARD™

WATERPROOFING SOLUTIONS

## HORIZONTAL SURFACES

Waterproofing 8 year* Warranty

